## QUESTIONS FOR ANSWERS ON THE DAY
### (but not taken up)

### Bore-wells for Lingasugur Taluk

726 SRI A. BASAWARAJA PATIL (Lingasugur) – Will the Minister for Rural Developmentand Panchayat Raj be pleased to state :

(a) the number of Wells dug out in Lingasugur Taluk upto 1976;

(b) the number of pumps installed to tube wells from 1977 uptil now ?

SRI B. RAMAIAH (Minister for Rural Development and Panchayat Raj )—

(a) 191 tube wells have been dug out upto the end of March 1977 in Lingasugur Tauk.

(b) 127 pumpsets have been fixed to tube wells from April 77 upto the end of January 81.

## REPRESENTATION BY MEMBERS

ಶ್ರೀ ಹೆಚ್. ವಿಶ್ವನಾಥ್.—ಮಾನ್ಯ ಅಧ್ಯಕ್ಷರೇ, ಜಗತ್ಪ್ರಸಿದ್ಧವಾದ ಕೃಷ್ಣರಾಜಸಾಗರ ಅಣೆಕಟ್ಟಿಗೆ ಹೊಂದಿಕೊಂಡಂಥ ಬೃಂದಾವನ್ ಗಾರ್ಡನ್‌ನಲ್ಲಿ ನಿನ್ನೆ ರಾತ್ರಿ ದೋಣಿ ವಿಹಾರಕ್ಕೆ ಹೋಗಿದ್ದಂಥ ಸುಮಾರು ೮೦ ಜನರು ಮೃತಪಟ್ಟಿದ್ದಾರೆ.

ಅಧ್ಯಕ್ಷರು.—ಇದು ನಿನ್ನೆ ಪ್ರಾಪ್ತ ಆಯಿತು.

ಶ್ರೀ ಕೆ. ರಾಮಭಟ್.—ನಾನು ರೂಲ್ ೩೧೨ ಕೆಳಗೆ ನೋಟೀಸ್ ಕೊಟ್ಟಿದ್ದೇನೆ. ಟಿಂಬರ್ ಬೆಲೆ ಜಾಸ್ತಿ ಮಾಡಿದ್ದರಿಂದ ಅನೇಕ ವ್ಯಾಕ್ಟರಿಗಳು ಮುಚ್ಚುವಂಥ ಸಂದರ್ಭ ಬಂದಿದೆ. ಅದರ ಬಗ್ಗೆ ಡಿಸ್ಕಸ್ ಮಾಡುವುದಕ್ಕೆ ನೋಟೀಸ್ ಕೊಟ್ಟಿದ್ದೇನೆ. ಅದು ಏನಾಗಿದೆ.

ಅಧ್ಯಕ್ಷರು.—ಬಜೆಟ್ ಡಿಸ್ಕಸ್ ಇದೆ, ಆಗ ಪ್ರಸ್ತಾಪ ಮಾಡಬಹುದು.

ಶ್ರೀ ಕೆ ರಾಮಭಟ್.—ಆ ರೂಲ್ ೩೧೨ ರ ಕೆಳಗೆ ಬರುವುದಿಲ್ಲ ಎಂದು ಅಪ್ಪಣೆ ಕೊಡಿಸುತ್ತಾ ಇದ್ದೀರಾ ?

ಅಧ್ಯಕ್ಷರು.—ಹಾಗೇನಿಲ್ಲ.

೨.೦೦ ಪಿ. ಎಂ.

ಶ್ರೀ ಬಿ. ಎನ್. ಕೆಂಗೇಗೌ—ಮಾನ್ಯ ಅಧ್ಯಕ್ಷರೇ ಮೈಸೂರು ನಗರದಲ್ಲಿ ತಾರೀಖು ೨೦.೩.೮೧ ರ ದಿವಸ ಮೈಸೂರು ನಗರ ಕಾರ್ಪೋಷನ್ನಿನವರು ಮೈಸೂರು ಸ್ಯಾಯನೇಜ್ ಫಾರಂನಲ್ಲಿ ಉತ್ಪನ್ನವಾಗ ತಕ್ಕಂಥ ಹಸಿ ಹುಲ್ಲನ್ನು ೧೦ ಕೆ. ಜಿ. ೭೦ ಪೈಸೆಗೆ ಮಾರಾಟ ಮಾಡುತ್ತಿದ್ದುದ್ದನ್ನು ಇದ್ದಕ್ಕಿದ ಹಾಗೆ ೭೦ ಪೈಸೆಗೆ ಮಾಡಿದ್ದಾರೆ. ಆಲ್ಲಿ ಹಗಳನ್ನು ದನಕರುಗಳನ್ನು ಸಾಕತಕ್ಕಂಥ ಜನ ಇದರಿಂದ ಮಿಂಚಿನ ಮುಷ್ಕರಗಳನ್ನು ಹೂಡಿದ್ದಾರೆ ಇದು ನಿಜವಾಗಿಯೂ ಸರಿಯಾದದ್ದಲ್ಲ. ೮ ದಿವಸಗಳ ಹಿಂದೆ ತಾನೇ ಹುಲ್ಲಿನ ದರವನ್ನು ನಿಷ್ಕ ಮಾಡಿ ಒಂದು ಆದೇಶವನ್ನು ಹೊರಡಿಸಿದ್ದೀರಿ, ೮ ದಿವಸಗಳಾದ ನಂತರ ಕೂಡಲೇ ೭೦ ಪೈಸೆಯಿಂದ ೭೦ ಪೈಸೆಗೆ ಏರಿಸಿದ್ದಾರೆ.